ದಿ: ೨೩.೦೫.೨೦೨೩ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ, ಮುಂದುವರೆದ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀ ಎ.ಜಿ.ಎನ್. ವಕೀಲರಿಂದ,

ನಮ್ಮ ತಾತ ಹಾಗೂ ಅವರ ಅಣ್ಣ ತಮ್ಮಂದಿರು ಸರ್ವೆ ನಂ.೩/೨ ರಲ್ಲಿ ಪೂರ್ವ ಪಶ್ಚಿಮವಾಗಿ ಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ಸದರಿ ಆಸ್ತಿಯಲ್ಲಿ ೨೭ ಗುಂಟೆ ಹರಿಜನ ಕಾಲೋನಿಗೆ ಮಂಜೂರು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸ್ವಾಧೀನ ಆಗಿರುವ ೨೭ ಗುಂಟೆಯನ್ನು ಸೇರಿಸಿ ನಮ್ಮ ತಾತ ಹಾಗೂ ಅವರ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಸ್ವಾಧೀನ ಆಗಿದ್ದರು ಸಹ ನಮ್ಮ ತಾತ ಹಾಗೂ ಅವರ ಅಣ್ಣ ತಮ್ಮಂದಿರು ಪಹಣಿಗಳನ್ನು ಸೃಷ್ಟಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸ್ವಾಧೀನ ಪಡಿಸಿಕೊಂಡಿರುವ ಜಮೀನನ್ನು ಹೊರತುಪಡಿಸಿ, ಪೂರ್ವ ಪಶ್ಚಿಮವಾಗಿ ಅವರು ಉಳುಮೆ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ನನಗೆ ನೀಡಿರುವ ದಾನ ಪತ್ರದಲ್ಲಿ ತೋರಿಸಿರುವ ಆಸ್ತಿಗೆ ಉತ್ತರ ದಕ್ಷಿಣವಾಗಿ ಸ್ಕೆಚ್ ಮಾಡಿದ್ದಾರೆ. ನಾನು ಹಾಜರುಪಡಿಸಿರುವ ನಿಪಿ.೨ ರಂತೆ ಸ್ಕೆಚ್ ಆಗಿದೆ ಎಂದರೆ ಸರಿಯಲ್ಲ.

ಮುನಿಯಪ್ಪರವರಿಗೆ ೩/೨ ಆಸ್ತಿಯಲ್ಲಿ ಉತ್ತರ ದಕ್ಷಿಣವಾಗಿ ಯಾವುದೇ ಆಸ್ತಿ ಬಂದಿಲ್ಲ ಹಾಗಾಗಿ ಅವರು ಬೈಯಮ್ಮರವರಿಗೆ ಆ ರೀತಿ ಆಸ್ತಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತ , ತಾಯಿ ಮತ್ತು ನಾವು ಸೇರಿಕೊಂಡು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ಆಸ್ತಿಯನ್ನು ಸೇರಿಸಿ ಉತ್ತರ ದಕ್ಷಿಣವಾಗಿ ನಕ್ಷೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಡಿ.ಡಿ.ಎಲ್.ಆರ್ ಆದೇಶದಂತೆ ನಾವು ಸ್ಕೆಚ್ ಮಾಡಿಸಿಕೊಂಡಿರುವ ವಿಸ್ತೀರ್ಣ ಮತ್ತು ಪಹಣಿಗಳಲ್ಲಿ ನಮೂದಾಗಿರುವ ವಿಸ್ತೀರ್ಣ ರದ್ದಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಡಿ.ಡಿ.ಎಲ್.ಆರ್ ಆದೇಶದಂತೆ ಹಿಂದಿನ ಪಹಣಿಗಳನ್ನು ಮತ್ತು ಸರ್ವೆ ದಾಖಲೆಗಳನ್ನು ರದ್ದುಪಡಿಸಿ, ಒಟ್ಟುಗೂಡಿಸಿ ಸರ್ವೆ ನಂ.೩/೨ ಎಂದು ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೆ ಒಟ್ಟುಗೂಡಿಸಿರುವ ಕುರಿತು ನನಗೆ ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ.೧ ರಿಂದ ೩ ದಾಖಲೆಗಳಲ್ಲಿರುವ ವಿಸ್ತೀರ್ಣ ಮತ್ತು ಚಕ್ಕುಬಂದಿ ಈಗ ಅಸ್ತಿತ್ವದಲ್ಲಿಲ್ಲ ಮತ್ತು ಅದರಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಪಿ.೧ ದಾನಪತ್ರದಲ್ಲಿ ಬರೆದಿರುವ ಐದು ಗುಂಟೆ ಚಕ್ಕುಬಂದಿಯಲ್ಲಿ ನಾನು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ.

ಬೈಯಮ್ಮ ಇವರಿಗೆ ದಾನ ಪತ್ರದಲ್ಲಿ ನಮೂದಿಸಿದಂತೆ ಐದು ಗುಂಟೆ ಚಕ್ಕುಬಂದಿ ವಿಸ್ತೀರ್ಣವನ್ನು ಬರೆದುಕೊಡುವ ಹಕ್ಕು ಇಲ್ಲದಿದ್ದರು ಸಹ ಸೃಷ್ಟಿಸಿಕೊಂಡು ದಾಖಲೆ ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಅಸ್ತಿತ್ವದಲ್ಲಿ ಇಲ್ಲದ ಆಸ್ತಿಗೆ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿದಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೨೦೧೪ರಲ್ಲಿ ಪ್ರತಿವಾದಿಯರು ಜೆ.ಸಿ.ಬಿ ತೆಗೆದುಕೊಂಡು ಬಂದು, ನಮ್ಮ ಬೆಳೆಯನ್ನು ನಾಶಪಡಿಸಿ, ನಮಗೆ ತೊಂದರೆ ನೀಡಿದರು. ದಿನಾಂಕ ಸಮಯ ನನಗೆ ನೆನಪಿಲ್ಲ. ೩/೨ ಆಸ್ತಿಯಲ್ಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು, ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾವು ಸೃಷ್ಟಿಸಿಕೊಂಡಿರುವ ದಾಖಲೆಗಳ ವಿರುದ್ದ ಡಿ.ಡಿ.ಎಲ್.ಆರ್. ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ಅರ್ಜಿಯ ಆದೇಶದಂತೆ ದಾಖಲೆ ನಾವು ಸೃಷ್ಟಿಸಿಕೊಂಡಿರುವ ದಾಖಲೆಗಳು ರದ್ದಾಗಿವೆ ಎಂದರೆ ನನಗೆ ಗೊತ್ತಿಲ್ಲ.

ಡಿ.ಡಿ.ಎಲ್.ಆರ್. ಆದೇಶದ ವಿರುದ್ದ ಜೆ.ಡಿ.ಎಲ್.ಆರ್ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಆದೇಶದ ವಿರುದ್ದ ಜೆ.ಡಿ.ಎಲ್.ಆರ್. ರವರ ಮುಂದೆ ಸಲ್ಲಿಸಿರುವ ಅರ್ಜಿ ಸಂಖ್ಯೆ ೧೨/೨೦೨೧-೨೨ ದಿ: ೩೧.೦೩.೨೦೨೩ ವಜಾ ಗೊಂಡಿದೆ ಎಂದರೆ ಸರಿಯಲ್ಲ. ಅರ್ಜಿ ವಜಾ ಆಗಿರುವ ಕುರಿತು ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಬೆಳೆ ನಾಶಪಡಿಸಿರುವ ಕುರಿತು ದೂರು ನೀಡಿದ್ದೇವೆ. ಸದರಿ ದಾಖಲೆಯನ್ನು ನಮ್ಮ ವಕೀಲರು ಕೇಳಿಲ್ಲ ಹಾಗಾಗಿ ನಾವು ಹಾಜರುಪಡಿಸಿಲ್ಲ ಎನ್ನುತ್ತಾರೆ.

ಪ್ರತಿವಾದಿಯರು ಮೇಲೆ ಹೇಳಿದಂತೆ ತೊಂದರೆ ನೀಡಿರುವ ಕುರಿತು ವಾದ ಪತ್ರದಲ್ಲಿ ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿಯು ಯಾವುದೇ ತೊಂದರೆ ನೀಡಿಲ್ಲವಾದ್ದರಿಂದ ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನಿಪಿ.೧ ರ ದಾನ ಪತ್ರದಲ್ಲಿ ತೋರಿಸಿದ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಹಾಗಾಗಿ ಪ್ರತಿವಾದಿಯರು ನಮಗೆ ತೊಂದರೆ ಕೊಡುವ ಪ್ರಮೇಯ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಾನು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**